# OurShare

Kerry ಯ ಭಾಗವನ್ನು ಸ್ವಂತದ್ದಾಗಿ ಮಾಡಿ

ಅನ್ವೇಷಣೆ →




ಉದ್ಯೋಗಿ ಕರಪತ್ರ

# OurShare ಅನ್ನು ಪರಿಚಯಿಸುತ್ತಿದ್ದೇವೆ

**Kerry ಯ ಜಾಗತಿಕ ಎಲ್ಲಾ-ಉದ್ಯೋಗಿ ಷೇರು ಯೋಜನೆ**
Kerry ಯಲ್ಲಿ ನಮ್ಮ ಪ್ರಯಾಣದಲ್ಲಿ ನಿಮ್ಮ ಪಾತ್ರಕ್ಕಾಗಿ ನಿಮಗೆ ಗೌರವ ನೀಡಲಾಗಿದೆ, ಪುರಸ್ಕಾರ ನೀಡಲಾಗಿದೆ ಮತ್ತು ನಿಮ್ಮನ್ನು ಗುರುತಿಸಲಾಗಿದೆ ಎಂಬ ಒಂದು ಅಂತರ್ಗತ ಕೆಲಸದ ಸ್ಥಳವನ್ನು ನಿರ್ಮಿಸುವ ಬಗ್ಗೆ ನಾವು ಕಾಳಜಿ ವಹಿಸುತ್ತೇವೆ.

ಇತ್ತೀಚೆಗೆ,ಈ ವಿಷಯಗಳನ್ನು ಸಾಧಿಸಲು ನಾವು ಇನ್ನೇನು ಮಾಡಬಹುದು ಎಂದು ನಿಮ್ಮನ್ನು ಕೇಳಿದ್ದೇವೆ. ಮತ್ತು ನೀವು ನಮಗೆ ಹೇಳಿದ್ದೀರಿ. ನಮ್ಮ ದೃಷ್ಟಿ, ಮೌಲ್ಯಗಳು ಮತ್ತು ಉದ್ದೇಶದೊಂದಿಗೆ ನೀವು ಹೆಚ್ಚು ಸಂಪರ್ಕ ಹೊಂದಲು ಬಯಸುತ್ತೀರಿ ಎಂದು ಹೇಳಿದ್ದೀರಿ. ಆದ್ದರಿಂದ ನಮ್ಮ ಮಾಲೀಕತ್ವದ ಮೌಲ್ಯಕ್ಕೆ ಅನುಗುಣವಾಗಿ, OurShare, Kerry  ಯ ಒಂದು ಭಾಗವನ್ನು ನಿಮ್ಮದಾಗಿಸಿಕೊಳ್ಳುವ ಒಂದು ಅವಕಾಶವಾಗಿದೆ.

**ನೀವು ಕೇಳಿದ್ದೀರಿ, ನಾವು ಆಲಿಸಿದ್ದೇವೆ.**

ನೀವು ಮತ್ತು ನಮ್ಮ ಎಲ್ಲಾ ಸಹೋದ್ಯೋಗಿಗಳು ನಮ್ಮ ಯಶಸ್ಸನ್ನು ಹಂಚಿಕೊಳ್ಳಲು ನಾವು OurShare ರಚಿಸಿದ್ದೇವೆ.

**OurShare ಎಂದರೇನು?**
OurShare ನಮ್ಮ ಜಾಗತಿಕ ಎಲ್ಲಾ-ಉದ್ಯೋಗಿ ಷೇರು ಯೋಜನೆ ಆಗಿದೆ. Kerry ಷೇರುದಾರರಾಗಲು ಮತ್ತು Kerry ಯ ಭಾಗವನ್ನು ನಿಮ್ಮದಾಗಿಸಲು ನೀವು ಮತ್ತು ವ್ಯಾಪಾರದಾದ್ಯಂತ ಇರುವ ಎಲ್ಲರಿಗೂ ಇದು ಒಂದು ಮಾರ್ಗವಾಗಿದೆ.

ಈ ಕಿರು ಪುಸ್ತಿಕೆಯಲ್ಲಿ OurShare ಕುರಿತು ನೀವು ತಿಳಿದುಕೊಳ್ಳಬೇಕಾದ ಎಲ್ಲವನ್ನೂ ನೀವು ಕಾಣಬಹುದು. ಒಟ್ಟಿಗೆ ಬೆಳೆಯುವ ಈ ರೋಮಾಂಚಕಾರಿ ಅವಕಾಶದಲ್ಲಿ ನೀವು ನಮ್ಮೊಂದಿಗೆ ಸೇರುತ್ತೀರಿ ಎಂದು ನಾವು ಭಾವಿಸುತ್ತೇವೆ.

**OurShare ಗೆ ಯಾರು ಸೇರಬಹುದು?**
OurShare ಎಲ್ಲಾ Kerry ಸಹೋದ್ಯೋಗಿಗಳಿಗಾಗಿ ಇದೆ – ನೀವು ಪೂರ್ಣ ಸಮಯವಿರಲಿ ಅಥವಾ ಅರೆಕಾಲಿಕವಾಗಿರಲಿ.  1 ಆಗಸ್ಟ್ 2024 ಕ್ಕಿಂತ ಮೊದಲು ನೀವು Kerry ಉದ್ಯೋಗಿಯಾಗಿದ್ದರೆ ಮತ್ತು 18 ವರ್ಷಗಳಿಗಿಂತ ಹೆಚ್ಚು ವಯಸ್ಸಿನವರಾಗಿದ್ದರೆ ನೀವು ಸೇರಿಕೊಳ್ಳಬಹುದು.



# ಪ್ರಮುಖ ವೈಶಿಷ್ಟ್ಯಗಳು

**OurShare ಸೇರುವುದು Kerry ಷೇರುದಾರರಾಗಲು ಮತ್ತು Kerry ಭಾಗವನ್ನು ನಿಮ್ಮದಾಗಿಸಲು ನಿಮಗಿರುವ ಅವಕಾಶವಾಗಿದೆ. OurShare ಸಂಪೂರ್ಣವಾಗಿ ಐಚ್ಛಿಕವಾಗಿದೆ - ಇದು ಸಂಪೂರ್ಣವಾಗಿ ನಿಮ್ಮ ಆಯ್ಕೆಯಾಗಿದೆ.**

**ಇದು ಎಲ್ಲರನ್ನೂ ಒಳಗೊಂಡಿದೆ**

ನಿಮ್ಮ ನಿವ್ವಳ ವೇತನದಿಂದ ತಿಂಗಳಿಗೆ €10 ಮತ್ತು €200 (ಅಥವಾ ಸ್ಥಳೀಯ ಕರೆನ್ಸಿಗೆ ಸಮಾನವಾದದ್ದು) ನಡುವಿನ ಮೊತ್ತದ ಕೊಡುಗೆ ನೀಡಿ

**ಇದು ಸುಲಭವಾಗಿದೆ**

ಉಳಿದದ್ದನ್ನು ನಾವು ಮಾಡುತ್ತೇವೆ! ನಿಮ್ಮ ಕೊಡುಗೆಗಳನ್ನು ಪ್ರತಿ ತಿಂಗಳು Kerry ಷೇರುಗಳನ್ನು ಖರೀದಿಸಲು ಬಳಸಲಾಗುತ್ತದೆ...ನಿಮ್ಮ ಪಾಟ್ ಬೆಳೆಯುವುದನ್ನು ವೀಕ್ಷಿಸಿ

**ಇದು ಲಾಭದಾಯಕವಾಗಿದೆ**

ನೀವು ಖರೀದಿಸುವ ಪ್ರತಿ ಮೂರಕ್ಕೆ Kerry ಯಿಂದ ಹೆಚ್ಚುವರಿ ಪಾಲನ್ನು ಸ್ವೀಕರಿಸಿ - ಈ ಹೆಚ್ಚುವರಿ ಷೇರುಗಳನ್ನು ಅನ್‌ಲಾಕ್ ಮಾಡಲು ನಿಮ್ಮ ಷೇರುಗಳನ್ನು ಎರಡು ವರ್ಷಗಳವರೆಗೆ ಇರಿಸಿ

**ಇದು ಸಬಲೀಕರಣವಾಗಿದೆ**

ಯಾವುದೇ ಲಾಭದ ಪಾಲನ್ನು ಲಾಭಾಂಶವಾಗಿ ಆನಂದಿಸಿ ಮತ್ತು ಷೇರುದಾರರ ಸಭೆಗಳಲ್ಲಿ ಮತ ಚಲಾಯಿಸಿ

**ಇದು ಹೊಂದಿಕೊಳ್ಳಬಹುದಾಗಿದೆ**

ನಿಮ್ಮ ಮಾಸಿಕ ಕೊಡುಗೆಗಳನ್ನು ನೀವು ಬದಲಾಯಿಸಬಹುದು ಅಥವಾ ಯಾವುದೇ ಸಮಯದಲ್ಲಿ ಆಯ್ಕೆಯಿಂದ ಹೊರಗುಳಿಯಬಹುದು

# OurShare – ನಿಮ್ಮ ಟೈಮ್‌ಲೈನ್

**OurShare ಅನ್ನು ಸೆಪ್ಟೆಂಬರ್‌ನಲ್ಲಿ ಪ್ರಾರಂಭಿಸಿದಾಗ ನೀವು ಅದಕ್ಕೆ ಸೇರಲು ಸಾಧ್ಯವಾಗುತ್ತದೆ. ನೀವು Kerry ಯ ಒಂದು ಭಾಗವನ್ನು ಸ್ವಂತವಾಗಿಸಲು ಬಯಸಿದರೆ, ಈ ದಿನಾಂಕಗಳನ್ನು ಮಿಸ್ ಮಾಡಿಕೊಳ್ಳಬೇಡಿ:**

1. **ಸೆಪ್ಟೆಂಬರ್ '24**
   **ಸೇರಿಕೊಳ್ಳಿ...**
   ಮತ್ತು ನಿಮ್ಮ ಷೇರುದಾರರ ಪ್ರಯಾಣವನ್ನು ಪ್ರಾರಂಭಿಸಿ

2. **ಅಕ್ಟೋಬರ್ '24 - ಸೆಪ್ಟೆಂಬರ್ '25**
   **ಕೊಡುಗೆ ನೀಡಿ...**
   ನಿಮ್ಮ ನಿವ್ವಳ ಪಾವತಿಯಿಂದ (ತೆರಿಗೆ ನಂತರ) 12 ತಿಂಗಳವರೆಗೆ ತಿಂಗಳಿಗೆ €10 ಮತ್ತು €200 ನಡುವೆ

3. **ನವೆಂಬರ್ '24 - ಅಕ್ಟೋಬರ್ '25**
   **ಖರೀದಿಸಿ...**
   ನಿಮ್ಮ ಕೊಡುಗೆಗಳೊಂದಿಗೆ ನಾವು ನಿಮ್ಮ ಷೇರುಗಳನ್ನು ಖರೀದಿಸುತ್ತೇವೆ

4. **ಅಕ್ಟೋಬರ್ '24 - ಅಕ್ಟೋಬರ್ '26**
   **ಉಳಿಸಿಕೊಳ್ಳಿ...**
   ಹೆಚ್ಚುವರಿ ಷೇರುಗಳನ್ನು ಅನ್‌ಲಾಕ್ ಮಾಡಲು ನಿಮ್ಮ ಷೇರುಗಳನ್ನು ಎರಡು ವರ್ಷಗಳವರೆಗೆ ಉಳಿಸಿಕೊಳ್ಳಿ

5. **ಅಕ್ಟೋಬರ್ '26**
   **ಅನ್‌ಲಾಕ್ ಮಾಡಿ...**
   ನಿಮ್ಮ ಹೆಚ್ಚುವರಿ ಷೇರುಗಳು - ಅವುಗಳನ್ನು ಇರಿಸಿ ಅಥವಾ ಮಾರಾಟ ಮಾಡಿ!

ತೋರಿಸಿರುವ ಟೈಮ್‌ಲೈನ್ 2 ವರ್ಷಗಳವರೆಗೆ ಇರುತ್ತದೆ (ಸೆಪ್ಟೆಂಬರ್ '24 - ಅಕ್ಟೋಬರ್ '26). ಪ್ರತಿ ಸೆಪ್ಟೆಂಬರ್‌ನಲ್ಲಿ ಹೊಸ ಸುತ್ತನ್ನು ಸೇರಲು ಅವಕಾಶವಿರುತ್ತದೆ. ಎರಡು ಸುತ್ತಿನ ನಡುವೆ ಯಾವಾಗಲೂ ಓವರ್‌ಲ್ಯಾಪ್ ಇರುತ್ತದೆ, ಮೊದಲ ಸುತ್ತಿನ ಕೊಡುಗೆಗಳು ಎರಡನೇ ಸುತ್ತು ಪ್ರಾರಂಭವಾಗುತ್ತಿದ್ದಂತೆಯೇ ನಿಲ್ಲುತ್ತವೆ.

**ಸುತ್ತು 1: ಸೆಪ್ಟೆಂಬರ್ '24 – ಅಕ್ಟೋಬರ್ '26**

**ಸುತ್ತು 2: ಸೆಪ್ಟೆಂಬರ್ '25 – ಅಕ್ಟೋಬರ್ '27**

ಮತ್ತು ವಿಷಯಗಳನ್ನು ಸುಲಭಗೊಳಿಸಲು, ನೀವು ಸೇರಿದಾಗ, ನೀವು ಸ್ವಯಂಚಾಲಿತವಾಗಿ ಭವಿಷ್ಯದ ಸುತ್ತುಗಳ ಭಾಗವಾಗುತ್ತೀರಿ. ಸಹಜವಾಗಿ, ನೀವು ಯಾವುದೇ ಸಮಯದಲ್ಲಿ ನಿಲ್ಲಿಸಬಹುದು.

ಈ ವರ್ಷ ಸೇರಲು ನೀವು ಖಚಿತವಾಗಿರದಿದ್ದರೆ, ಮುಂದಿನ ಸೆಪ್ಟೆಂಬರ್‌ನಲ್ಲಿ ಸೇರಲು ಅವಕಾಶವಿದೆ.

# OurShare ಹೇಗೆ ಕೆಲಸ ಮಾಡುತ್ತದೆ

ಒಂದು ವರ್ಷದವರೆಗೆ ಪ್ರತಿ ತಿಂಗಳು ಎಷ್ಟು ಕೊಡುಗೆ ನೀಡಬೇಕೆಂದು ನೀವು ನಿರ್ಧರಿಸುತ್ತೀರಿ ಮತ್ತು ಮುಂದಿನ 12 ತಿಂಗಳಲ್ಲಿ ತೆರಿಗೆಯ ನಂತರದ ನಿಮ್ಮ ಪಾವತಿಯಿಂದ ಪೇರೋಲ್ ಆ ಮೊತ್ತವನ್ನು ತೆಗೆದುಕೊಳ್ಳುತ್ತದೆ. ಇದನ್ನು ಕೊಡುಗೆ ಎಂದು ಕರೆಯಲಾಗುತ್ತದೆ ಮತ್ತು ನಿಮ್ಮ ಪರವಾಗಿ ಷೇರುಗಳನ್ನು ಖರೀದಿಸಲು ಇದನ್ನು ಬಳಸಲಾಗುತ್ತದೆ.

ಇದು ಅಕ್ಟೋಬರ್‌ನಿಂದ ಮುಂದಿನ ಸೆಪ್ಟೆಂಬರ್‌ವರೆಗೆ ನಡೆಯುತ್ತದೆ. ಪ್ರತಿ ತಿಂಗಳು, ನೀವು ಖರೀದಿಸುವ ಪ್ರತಿ ಮೂರಕ್ಕೆ Kerry ಯಿಂದ ಒಂದು ಹೆಚ್ಚುವರಿ ಷೇರನ್ನು ನೀವು ಸ್ವೀಕರಿಸುತ್ತೀರಿ - ಈ ಹೆಚ್ಚುವರಿಗಳನ್ನು ಅನ್‌ಲಾಕ್ ಮಾಡಲು ನಿಮ್ಮ ಷೇರುಗಳನ್ನು ಎರಡು ವರ್ಷಗಳವರೆಗೆ ಇರಿಸಿಕೊಳ್ಳಿ.

OurShare ಮೂರು ಭಾಗಗಳಿಂದ ಕೂಡಿದೆ:

- **ಖರೀದಿಸಿದ ಷೇರುಗಳು** – ಇವು ನಿಮ್ಮ ಮಾಸಿಕ ಕೊಡುಗೆಗಳಿಂದ ಖರೀದಿಸಿದ ಷೇರುಗಳಾಗಿವೆ
- **ಹೊಂದಾಣಿಕೆಯ ಷೇರುಗಳು** – ನೀವು Kerry ಯೊಂದಿಗೆ ಉಳಿದುಕೊಂಡರೆ ಮತ್ತು ನಿಮ್ಮ ಖರೀದಿಸಿದ ಷೇರುಗಳನ್ನು ಎರಡು ವರ್ಷಗಳವರೆಗೆ ಇರಿಸಿದರೆ, ನೀವು ಖರೀದಿಸುವ ಪ್ರತಿ ಮೂರಕ್ಕೆ ನೀವು Kerry ಯಿಂದ ಒಂದು ಹೆಚ್ಚುವರಿ ಷೇರನ್ನು ಪಡೆಯುತ್ತೀರಿ
- **ಲಾಭಾಂಶದ ಷೇರುಗಳು** – Kerry ತನ್ನ ಲಾಭದ ಒಂದು ಭಾಗವನ್ನು ಷೇರುದಾರರಿಗೆ ಪಾವತಿಸಿದಾಗ ಮತ್ತಷ್ಟು ಷೇರುಗಳನ್ನು ಪಡೆಯಿರಿ

ನಿಮ್ಮ ಹೊಂದಾಣಿಕೆ ಮತ್ತು ಲಾಭಾಂಶದ ಷೇರುಗಳ ಮೇಲೆ ನೀವು ತೆರಿಗೆ ಪಾವತಿಸಬೇಕಾಗಬಹುದು. ಬಾಕಿ ಮೊತ್ತ, ಹಾಗೆಯೇ ಅದನ್ನು ಹೇಗೆ ಮತ್ತು ಯಾವಾಗ ಪಾವತಿಸಬೇಕು ಎಂಬುದು ದೇಶದಿಂದ ದೇಶಕ್ಕೆ ಬದಲಾಗುತ್ತದೆ. ನಿಮ್ಮ ದೇಶದಲ್ಲಿನ ನಿಯಮಗಳ ಕುರಿತು ಮಾಹಿತಿಗಾಗಿ, **OurShare Hub** ನಲ್ಲಿನ ಸಂಪನ್ಮೂಲಗಳ ವಿಭಾಗದಲ್ಲಿ ನಮ್ಮ 'ದೇಶದ ಉದ್ಯೋಗಿ ತೆರಿಗೆ ಟಿಪ್ಪಣಿಗಳನ್ನು' ನೋಡಿ.



# ಆಕ್ಷನ್‌ನಲ್ಲಿ OurShare

ಅನನ್ಯಾಳ ಕಥೆ →

**OurShare ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದರ ಕುರಿತು ನಾವು ನಿಮಗೆ ಸ್ವಲ್ಪ ಹೇಳಿದ್ದೇವೆ. ಈಗ ಅದರ ಕುರಿತಾಗಿ ನೋಡೋಣ! ಕಿರಣ್ ಅವರನ್ನು ಭೇಟಿಯಾಗಿ.**




| | | | | |
|---|---|---|---|---|
| ಕಿರಣ್ ಅವರು ಕೋಟಿಂಗ್ಸ್ ಪ್ರೊಡಕ್ಷನ್ ಲೈನ್‌ನಲ್ಲಿ ಪ್ಲಾಂಟ್ ಆಪರೇಟರ್ ಆಗಿದ್ದಾರೆ. | ಕಿರಣ್ OurShare ಗೆ ಸೇರುತ್ತಾರೆ ಮತ್ತು ತಿಂಗಳಿಗೆ €45 ಮೊತ್ತದ ಕೊಡುಗೆ ನೀಡುತ್ತಾರೆ. | Kerry ಷೇರು ಬೆಲೆಯು ವರ್ಷಕ್ಕೆ ಪ್ರತಿ ಷೇರಿಗೆ €90 ರಲ್ಲಿ ಇರುತ್ತದೆ ಎಂದು ಅಂದುಕೊಳ್ಳೋಣ. ಈ ಸನ್ನಿವೇಶದಲ್ಲಿ, ಕಿರಣ್ ಪ್ರತಿ ತಿಂಗಳು ಅರ್ಧ ಷೇರನ್ನು ಖರೀದಿಸುತ್ತಾರೆ. €45 ÷ €90 = 0.5 ಷೇರುಗಳು | ವರ್ಷದ ಅಂತ್ಯದ ವೇಳೆ ಕಿರಣ್ ಅವರ ಕೊಡುಗೆ €540 ಆಗಿರುತ್ತದೆ. ತಿಂಗಳಿಗೆ 0.5 ಷೇರುಗಳು x 12 ತಿಂಗಳುಗಳು = 6 ಷೇರುಗಳು | ನಾವು ಕಿರಣ್ ಅವರಿಗೆ ಅವರ ಪಾಟ್‌ಗೆ ಸೇರಿಸಲು ಅವರು ಖರೀದಿಸಿದ ಪ್ರತಿ 3 ಷೇರಿಗೆ 1 ಹೆಚ್ಚುವರಿ ಷೇರನ್ನು ನೀಡುತ್ತೇವೆ. 6 ಷೇರುಗಳು ÷ 3 = 2 ಹೆಚ್ಚುವರಿ ಷೇರುಗಳು |




| | | | | |
|---|---|---|---|---|
| ಒಟ್ಟಾರೆಯಾಗಿ, ಕಿರಣ್ ಈಗ Kerry ಯಲ್ಲಿ 8 ಷೇರುಗಳ ಜೊತೆಗೆ ಪಾವತಿಸಿದ ಲಾಭಾಂಶದಿಂದ ಸೇರಿಸಲಾದ ಯಾವುದೇ ಷೇರುಗಳನ್ನು ಹೊಂದಿದ್ದಾರೆ. | ಎರಡು ವರ್ಷಗಳ ನಂತರ, ಕಿರಣ್ ತನ್ನ ಷೇರುಗಳನ್ನು ಇಟ್ಟುಕೊಳ್ಳಬಹುದು ಅಥವಾ ಮಾರಾಟ ಮಾಡಬಹುದು! ಈ ಹೊತ್ತಿಗೆ Kerry ಯ ಷೇರಿನ ಬೆಲೆಯು ಪ್ರತಿ ಷೇರಿಗೆ €95 ರಷ್ಟು ಹೆಚ್ಚಾಗಿದೆ ಎಂದು ಊಹಿಸೋಣ. | ಕಿರಣ್ ಅವರ ಷೇರಿನ ಮೌಲ್ಯ ಈಗ €760 (8 ಷೇರುಗಳು x €95). ಇದು €220 (€760 ಮೌಲ್ಯ - €540 ಕೊಡುಗೆಗಳು) ಇದರ ಗಳಿಕೆಯಾಗಿದ್ದು, 40% ರಿಟರ್ನ್ ಜೊತೆಗೆ ಲಾಭಾಂಶದ ಷೇರುಗಳಾಗಿವೆ. | Kerry ಷೇರುದಾರನಾಗಿ ತನ್ನ ಪ್ರಯಾಣವನ್ನು ಮುಂದುವರಿಸಲು ಕಿರಣ್ ತನ್ನ ಷೇರುಗಳನ್ನು ಉಳಿಸಿಕೊಳ್ಳಲು ನಿರ್ಧರಿಸುತ್ತಾರೆ. | ಅವರು ಮೀಟಿಂಗ್‌ಗಳಲ್ಲಿ ಮತ ಚಲಾಯಿಸಲು ಮತ್ತು ಇನ್ನೂ ಹೆಚ್ಚಿನ ಲಾಭಾಂಶವನ್ನು ಪಾವತಿಸಿದಾಗ ಯಾವುದೇ ಲಾಭದ ಪಾಲನ್ನು ಸ್ವೀಕರಿಸಲು ಉತ್ಸುಕರಾಗಿದ್ದಾರೆ. |

**ದಯವಿಟ್ಟು ಈ ಉದಾಹರಣೆಗಳನ್ನು ಗಮನಿಸಿ:**

1. ಕೊಡುಗೆ ಅವಧಿಯಲ್ಲಿ Kerry ಷೇರಿನ ಬೆಲೆಯು €90 ಕ್ಕೆ ಸ್ಥಿರವಾಗಿರುತ್ತದೆ. ವಾಸ್ತವದಲ್ಲಿ ಇದು ಏರಿಳಿತವಾಗುವ ಸಾಧ್ಯತೆಯಿದೆ - ಅದು ಕೆಳಕ್ಕೆ ಮತ್ತು ಮೇಲಕ್ಕೆ ಹೋಗಬಹುದು.
2. ಹೋಲ್ಡ್ ಅವಧಿಯ ಕೊನೆಯಲ್ಲಿ ಷೇರು ಬೆಲೆ ಹೆಚ್ಚಾಗುತ್ತದೆ. ಆದಾಗ್ಯೂ, ಷೇರುಗಳ ಬೆಲೆಗಳು ಕಡಿಮೆಯಾಗಬಹುದು ಮತ್ತು ಹೆಚ್ಚಾಗಬಹುದು. ಹಣಕಾಸಿನ ಲಾಭದ ಮಟ್ಟವು ಮಾರಾಟದ ಸಮಯದಲ್ಲಿ ಷೇರು ಬೆಲೆಯನ್ನು ಅವಲಂಬಿಸಿರುತ್ತದೆ. ಯಾವುದೇ ಲಾಭವು ತೆರಿಗೆಗೆ ಒಳಪಟ್ಟಿರುತ್ತದೆ – ನಿಮ್ಮ ಸ್ಥಳೀಯ ತೆರಿಗೆ ಮಾರ್ಗದರ್ಶಿಯನ್ನು ನೋಡಿ.

ಇದನ್ನು ಸಹ ಗಮನಿಸಿ: Kerry ಷೇರುಗಳನ್ನು ಯುರೋಗಳಲ್ಲಿ ವ್ಯಾಪಾರ ಮಾಡಲಾಗುತ್ತದೆ. ನೀವು ಇನ್ನೊಂದು ಕರೆನ್ಸಿಯಲ್ಲಿ ನಿಮ್ಮ ಕೊಡುಗೆಯನ್ನು ನೀಡಿದರೆ, Kerry ಷೇರುಗಳನ್ನು ಖರೀದಿಸಲು ಬಳಸುವ ಮೊದಲು ಅದನ್ನು ಯುರೋಗಳಾಗಿ ಪರಿವರ್ತಿಸಲಾಗುತ್ತದೆ. ವಿನಿಮಯ ದರಗಳು ಕಾಲಾನಂತರದಲ್ಲಿ ಏರುತ್ತವೆ ಮತ್ತು ಇಳಿಯುತ್ತವೆ, ಇದು Kerry ಷೇರುಗಳನ್ನು ಖರೀದಿಸಲು ನೀವು ಪ್ರತಿ ತಿಂಗಳು ಎಷ್ಟು ಯುರೋಗಳನ್ನು ಹೊಂದಿರುವಿರಿ ಎಂಬುದರ ಮೇಲೆ ಪರಿಣಾಮ ಬೀರಬಹುದು.

# ಆಕ್ಷನ್‌ನಲ್ಲಿ OurShare

← ಕಿರಣ್ ಅವರ ಕಥೆ

**ನೀವು ಕಿರಣ್ ಅವರ ಕಥೆಯನ್ನು ನೋಡಿದ್ದೀರಿ... ಈಗ ಅನನ್ಯಾ ಅವರಿಗೆ OurShare ಹೇಗೆ ಕಾರ್ಯನಿರ್ವಹಿಸುತ್ತದೆ ಎಂಬುದನ್ನು ನೋಡೋಣ**



ಅನನ್ಯಾ RD&A ತಂಡದಲ್ಲಿ ಕೆಲಸ ಮಾಡುತ್ತಾರೆ.




ಅನನ್ಯಾ OurShare ಗೆ ಸೇರುತ್ತಾರೆ ಮತ್ತು ತಿಂಗಳಿಗೆ €135 ಮೊತ್ತದ ಕೊಡುಗೆ ನೀಡುತ್ತಾರೆ.




Kerry ಷೇರು ಬೆಲೆಯು ಇಡೀ ವರ್ಷಕ್ಕೆ ಷೇರಿಗೆ €90 ಆಗಿರುತ್ತದೆ ಎಂದು ಅಂದುಕೊಳ್ಳೋಣ. ಇದರರ್ಥ ಪ್ರತಿ ತಿಂಗಳು, ಅನನ್ಯಾ 1.5 ಷೇರುಗಳನ್ನು ಖರೀದಿಸುತ್ತಾರೆ. €135 ÷ €90 = 1.5 ಷೇರುಗಳು



ವರ್ಷದ ಅಂತ್ಯದಲ್ಲಿ ಅನನ್ಯಾ €1,620 ಕೊಡುಗೆ ನೀಡುತ್ತಾರೆ, 18 ಷೇರುಗಳನ್ನು ಆಕೆ ಖರೀದಿಸಿರುತ್ತಾರೆ. 1.5 ಷೇರುಗಳು/ತಿಂಗಳು x 12 ತಿಂಗಳು = 18 ಷೇರುಗಳು



ನಾವು ಅನನ್ಯಾ ಅವರಿಗೆ ಅವರ ಪಾಟ್‌ಗೆ ಸೇರಿಸಲು ಅವರು ಖರೀದಿಸಿದ ಪ್ರತಿ 3 ಷೇರಿಗೆ 1 ಹೆಚ್ಚುವರಿ ಷೇರನ್ನು ನೀಡುತ್ತೇವೆ. 18 ಷೇರುಗಳು ÷ 3 = 6 ಹೆಚ್ಚುವರಿ ಷೇರುಗಳು



ಒಟ್ಟಾರೆಯಾಗಿ, ಅನನ್ಯಾ ಈಗ Kerry ಯಲ್ಲಿ 24 ಷೇರುಗಳ ಜೊತೆಗೆ ಪಾವತಿಸಿದ ಲಾಭಾಂಶದಿಂದ ಸೇರಿಸಲಾದ ಯಾವುದೇ ಷೇರುಗಳನ್ನೂ ಹೊಂದಿದ್ದಾರೆ.




ಎರಡು ವರ್ಷಗಳ ನಂತರ, ಅನನ್ಯಾ ತಮ್ಮ ಷೇರುಗಳನ್ನು ಇಟ್ಟುಕೊಳ್ಳಬಹುದು ಅಥವಾ ಮಾರಾಟ ಮಾಡಬಹುದು! ಈ ಹೊತ್ತಿಗೆ Kerry ಯ ಷೇರಿನ ಬೆಲೆಯು ಪ್ರತಿ ಷೇರಿಗೆ €105 ರಷ್ಟು ಹೆಚ್ಚಾಗಿದೆ ಎಂದು ಊಹಿಸೋಣ.




ಅನನ್ಯಾರವರ 24 ಷೇರುಗಳು ಈಗ €2,520 (24 ಷೇರುಗಳು x €105) ಮೌಲ್ಯದ್ದಾಗಿರುತ್ತದೆ. €900 (€2,520 ಮೌಲ್ಯ - €1,620 ಕೊಡುಗೆಗಳು) (ಸುಮಾರು 55% ರಿಟರ್ನ್) ಗಳಿಕೆ ಜೊತೆಗೆ ಲಾಭಾಂಶದ ಪಾಲುಗಳು.



ಅನನ್ಯಾ ತಮ್ಮ ಷೇರುಗಳನ್ನು ಮಾರಾಟ ಮಾಡಲು ನಿರ್ಧರಿಸುತ್ತಾರೆ - ಆಕೆ ತನ್ನ ಮೊದಲ ಕಾರನ್ನು ಖರೀದಿಸಲು ಸಹಾಯವಾಗಲು ಹಣವನ್ನು ಬಳಸಲು ಬಯಸುತ್ತಾರೆ.



ಅನನ್ಯಾ OurShare ಅನ್ನು ಬಳಸುವ ಮೂಲಕ ಆರ್ಥಿಕ ಗುರಿಯತ್ತ ಪ್ರಗತಿ ಕಾಣಲು ಉತ್ತಮ ಮಾರ್ಗವನ್ನು ಕಂಡುಕೊಂಡಿದ್ದಾರೆ. ಅವರು ಸೆಪ್ಟೆಂಬರ್‌ನಲ್ಲಿ ಮುಂದಿನ OurShare ಸುತ್ತಿಗೆ ಸೇರಲು ಉತ್ಸುಕರಾಗಿದ್ದಾರೆ.

**ದಯವಿಟ್ಟು ಈ ಉದಾಹರಣೆಗಳನ್ನು ಗಮನಿಸಿ:**

1. ಕೊಡುಗೆ ಅವಧಿಯಲ್ಲಿ Kerry ಷೇರಿನ ಬೆಲೆಯು €90 ಕ್ಕೆ ಸ್ಥಿರವಾಗಿರುತ್ತದೆ. ವಾಸ್ತವದಲ್ಲಿ ಇದು ಏರಿಳಿತವಾಗುವ ಸಾಧ್ಯತೆಯಿದೆ - ಅದು ಕೆಳಕ್ಕೆ ಮತ್ತು ಮೇಲಕ್ಕೆ ಹೋಗಬಹುದು.
2. ಹೋಲ್ಡ್ ಅವಧಿಯ ಕೊನೆಯಲ್ಲಿ ಷೇರು ಬೆಲೆ ಹೆಚ್ಚಾಗುತ್ತದೆ. ಆದಾಗ್ಯೂ, ಷೇರುಗಳ ಬೆಲೆಗಳು ಕಡಿಮೆಯಾಗಬಹುದು ಮತ್ತು ಹೆಚ್ಚಾಗಬಹುದು. ಹಣಕಾಸಿನ ಲಾಭದ ಮಟ್ಟವು ಮಾರಾಟದ ಸಮಯದಲ್ಲಿ ಷೇರು ಬೆಲೆಯನ್ನು ಅವಲಂಬಿಸಿರುತ್ತದೆ. ಯಾವುದೇ ಲಾಭವು ತೆರಿಗೆಗೆ ಒಳಪಟ್ಟಿರುತ್ತದೆ – ನಿಮ್ಮ ಸ್ಥಳೀಯ ತೆರಿಗೆ ಮಾರ್ಗದರ್ಶಿಯನ್ನು ನೋಡಿ.

ಇದನ್ನು ಸಹ ಗಮನಿಸಿ: Kerry ಷೇರುಗಳನ್ನು ಯುರೋಗಳಲ್ಲಿ ವ್ಯಾಪಾರ ಮಾಡಲಾಗುತ್ತದೆ. ನೀವು ಇನ್ನೊಂದು ಕರೆನ್ಸಿಯಲ್ಲಿ ನಿಮ್ಮ ಕೊಡುಗೆಯನ್ನು ನೀಡಿದರೆ, Kerry ಷೇರುಗಳನ್ನು ಖರೀದಿಸಲು ಬಳಸುವ ಮೊದಲು ಅದನ್ನು ಯುರೋಗಳಾಗಿ ಪರಿವರ್ತಿಸಲಾಗುತ್ತದೆ. ವಿನಿಮಯ ದರಗಳು ಕಾಲಾನಂತರದಲ್ಲಿ ಏರುತ್ತವೆ ಮತ್ತು ಇಳಿಯುತ್ತವೆ, ಇದು Kerry ಷೇರುಗಳನ್ನು ಖರೀದಿಸಲು ನೀವು ಪ್ರತಿ ತಿಂಗಳು ಎಷ್ಟು ಯುರೋಗಳನ್ನು ಹೊಂದಿರುವಿರಿ ಎಂಬುದರ ಮೇಲೆ ಪರಿಣಾಮ ಬೀರಬಹುದು.

# ಸೇರಿಕೊಳ್ಳುವುದು ಹೇಗೆ

Kerry ಷೇರುದಾರರಾಗಲು ನಿಮ್ಮ ಅದ್ಭುತ ಅವಕಾಶಕ್ಕಾಗಿ, ನಿಮ್ಮ ವೈಯಕ್ತಿಕ ಆಹ್ವಾನವನ್ನು ಹುಡುಕಿ. planadmin-noreply@equateplus.com ಇಂದ 5 ಸೆಪ್ಟೆಂಬರ್‌ನಂದು ನೀವು ಇಮೇಲ್ ಸ್ವೀಕರಿಸುತ್ತೀರಿ, ಇದರಲ್ಲಿ ನಿಮ್ಮ EquatePlus ಖಾತೆಗೆ ಲಿಂಕ್ ಮತ್ತು ಲಾಗಿನ್ ಮಾಹಿತಿ ಇರುತ್ತದೆ. EquatePlus ಎಂಬುದು Computershare ರನ್ ಮಾಡುವ ಪ್ಲಾಟ್‌ಫಾರ್ಮ್, ಇದು ನಮ್ಮ ಆಯ್ಕೆಯ ಷೇರು ಯೋಜನೆಯ ಎಕ್ಸ್‌ಪರ್ಟ್. ಇಲ್ಲಿ ನೀವು ಸೇರಲು ಹೋಗುತ್ತೀರಿ ಮತ್ತು ನೀವು ಎಷ್ಟು ಕೊಡುಗೆ ನೀಡಲು ಬಯಸುತ್ತೀರಿ ಎಂಬುದನ್ನು ಆಯ್ಕೆ ಮಾಡಿಕೊಳ್ಳುತ್ತೀರಿ, ಹಾಗೆಯೇ ನಿಮ್ಮ ಷೇರುಗಳನ್ನು ಖರೀದಿಸಲು ಪ್ರಾರಂಭಿಸಿದ ನಂತರ ಇಲ್ಲೇ ಬದಲಾವಣೆಗಳನ್ನು ಮಾಡುತ್ತೀರಿ ಮತ್ತು ನಿರ್ವಹಿಸುತ್ತೀರಿ.

ನೀವು ಈಗಾಗಲೇ EquatePlus ಖಾತೆಯನ್ನು ಹೊಂದಿಲ್ಲದಿದ್ದರೆ, ಮೊದಲ ಬಾರಿಗೆ ಲಾಗ್ ಇನ್ ಮಾಡುವುದು ಬ್ಯಾಂಕ್ ಖಾತೆಯನ್ನು ತೆರೆಯುವಂತೆಯೇ ಇರುತ್ತದೆ. ನಿಮ್ಮ ಖಾತೆಯನ್ನು ಸಕ್ರಿಯಗೊಳಿಸಲು ನೀವು ಕೆಲವು ಆನ್‌ಬೋರ್ಡಿಂಗ್ ಹಂತಗಳನ್ನು ಪೂರ್ಣಗೊಳಿಸಬೇಕಾಗಿದೆ - ಪ್ರಕ್ರಿಯೆಯ ಕುರಿತು ನಿಮಗೆ ಸಹಾಯ ಮಾಡಲು ನಾವು ಹಂತ-ಹಂತದ ಮಾರ್ಗದರ್ಶಿಯನ್ನು ರಚಿಸಿದ್ದೇವೆ.

Kerry ಇಮೇಲ್ ವಿಳಾಸವನ್ನು ಹೊಂದಿಲ್ಲವೇ? ಪೂರ್ವ-ನೋಂದಣಿ ಮಾಡಲು ಮತ್ತು ನಿಮ್ಮ ವೈಯಕ್ತಿಕ ಇಮೇಲ್ ಅನ್ನು ನಮಗೆ ತಿಳಿಸಲು OurShare Hub: **kerryourshare.com** ಗೆ ಭೇಟಿ ನೀಡಿ. ನಿಮ್ಮ ಉದ್ಯೋಗಿ ಸಂಖ್ಯೆ ಮತ್ತು ಹುಟ್ಟಿದ ದಿನಾಂಕವೂ ನಿಮಗೆ ಬೇಕಾಗುತ್ತದೆ. ನೀವು ಸೇರಲು ಪರಿಗಣಿಸುತ್ತಿದ್ದೀರಿ ಎಂದು ಇದು ನಮಗೆ ಹೇಳುತ್ತದೆ - ನೋಂದಾಯಿಸಲು ಯಾವುದೇ ಬಾಧ್ಯತೆ ಇಲ್ಲ, ಇದರರ್ಥ ನಿಮ್ಮ ಇಮೇಲ್ ಆಹ್ವಾನವನ್ನು ನೀವು ಸ್ವೀಕರಿಸುತ್ತೀರಿ. ನಿಮ್ಮ ಉದ್ಯೋಗಿ ಸಂಖ್ಯೆಯನ್ನು ಕಂಡುಹಿಡಿಯಲು ನಿಮಗೆ ಸಹಾಯ ಬೇಕಾದರೆ ನಿಮ್ಮ ಮೇಲ್ವಿಚಾರಕ ಅಥವಾ ಲೈನ್ ಮ್ಯಾನೇಜರ್ ಅನ್ನು ಸಂಪರ್ಕಿಸಿ.



# ನೀವು ಕಳೆದ ವರ್ಷ ಸೇರಿದ್ದರೆ

ನೀವು ಸೆಪ್ಟೆಂಬರ್ 2023 ರಲ್ಲಿ OurShare ಗೆ ಸೇರಿದ್ದರೆ ಮತ್ತು ಇನ್ನೂ ಸಕ್ರಿಯ ಪಾಲ್ಗೊಳ್ಳುವವರಾಗಿದ್ದರೆ,* ನೀವು ಸ್ವಯಂಚಾಲಿತವಾಗಿ ಹೊಸ 2024-25 ಸೈಕಲ್‌ಗೆ ಮರು-ನೋಂದಾಯಿಸಿಕೊಳ್ಳುತ್ತೀರಿ. ನಿಮ್ಮ ಸ್ಥಳೀಯ ಕರೆನ್ಸಿಯಲ್ಲಿ ಕನಿಷ್ಠ ಅಥವಾ ಗರಿಷ್ಠ ಕೊಡುಗೆ ಬದಲಾಗದ ಹೊರತು ನಿಮ್ಮ ಮಾಸಿಕ ಕೊಡುಗೆ ಮೊತ್ತವನ್ನು ನಾವು ಹಾಗೆಯೇ ಇರಿಸಿಕೊಳ್ಳುತ್ತೇವೆ. ಅದು ನಿಮ್ಮ ಮೇಲೆ ಪರಿಣಾಮ ಬೀರಿದರೆ ನಾವು ನಿಮಗೆ ತಿಳಿಸುತ್ತೇವೆ.

OurShare 2023 ಗೆ ನಿಮ್ಮ ಅಂತಿಮ ಕೊಡುಗೆ ಸೆಪ್ಟೆಂಬರ್ 2024 ರಲ್ಲಿ ಇರುತ್ತದೆ ಮತ್ತು 2024-25 ರ ಚಕ್ರಕ್ಕೆ ನಿಮ್ಮ ಮೊದಲ ಕೊಡುಗೆ ಅಕ್ಟೋಬರ್ 2024 ರಲ್ಲಿ ಇರುತ್ತದೆ. ಇದರರ್ಥ ನಿಮ್ಮ ಕೊಡುಗೆಗಳು ಮುಂದುವರಿಯುತ್ತವೆ - ಯಾವುದೇ ಎರಡು ಕೊಡುಗೆ ಅಥವಾ ವಿರಾಮವಿಲ್ಲ.

ಆದ್ದರಿಂದ ನೀವು ತಲೆ ಕೆಡಿಸಿಕೊಳ್ಳದೆ ಆರಾಮವಾಗಿರಿ - ನಾವು ಎಲ್ಲವನ್ನೂ ನೋಡಿಕೊಳ್ಳುತ್ತೇವೆ.



*ನೀವು ನಿಮ್ಮ OurShare 2023 ಕೊಡುಗೆಗಳನ್ನು ನಿಲ್ಲಿಸಿದ್ದರೆ ಅಥವಾ ಸ್ವಯಂ-ನೋಂದಣಿಯಿಂದ ಹೊರಗುಳಿದಿದ್ದರೆ, ನಂತರ ನೀವು ಸ್ವಯಂಚಾಲಿತವಾಗಿ OurShare 2024 ಗೆ ದಾಖಲಾಗುವುದಿಲ್ಲ. ನಮ್ಮ ನೋಂದಣಿ ವಿಂಡೋದಲ್ಲಿ ನೀವು ಸೇರಬೇಕಾಗುತ್ತದೆ. ಅದನ್ನು ಹೇಗೆ ಮಾಡಬೇಕೆಂಬುದರ ಕುರಿತು ವಿವರಗಳಿಗಾಗಿ ನಮ್ಮ ಮಾರ್ಗದರ್ಶಿಯನ್ನು ನೋಡಿ.

**ನಾನು OurShare 2024 ಗೆ ಬದಲಾವಣೆಗಳನ್ನು ಮಾಡಲು ಬಯಸಿದರೆ ಏನು ಮಾಡಬೇಕು?**
OurShare ಹೊಂದಿಕೊಳ್ಳುತ್ತದೆ, ಆದ್ದರಿಂದ ನೀವು ಯಾವುದೇ ಸಮಯದಲ್ಲಿ ಬದಲಾವಣೆಗಳನ್ನು ಮಾಡಬಹುದು. ಆದಾಗ್ಯೂ, ನಿಮ್ಮ ಕೊಡುಗೆಗಳನ್ನು ನೋಡಲು ಮತ್ತು ಅವು ನಿಮಗಾಗಿ ಇನ್ನೂ ಕಾರ್ಯನಿರ್ವಹಿಸುತ್ತಿವೆಯೇ ಎಂದು ಪರಿಶೀಲಿಸಲು ಇದು ಉತ್ತಮ ಸಮಯ. ನಿಮ್ಮ ಆಯ್ಕೆಗಳಿಂದ ನೀವು ಇನ್ನೂ ಸಂತೋಷವಾಗಿರಬಹುದು ಅಥವಾ ನಿಮ್ಮ ಪರಿಸ್ಥಿತಿಗಳು ಬದಲಾಗಿರಬಹುದು.

ನೆನಪಿಡಿ, ನೀವು ಯಾವುದೇ ಸಮಯದಲ್ಲಿ ನಿಮ್ಮ ಮನಸ್ಸನ್ನು ಬದಲಾಯಿಸಬಹುದು!

**ನನ್ನ OurShare 2023 ಷೇರುಗಳು ಏನಾಗಿವೆ?**
OurShare 2023 ರ ಸಮಯದಲ್ಲಿ ನೀವು ಖರೀದಿಸಿದ ಷೇರುಗಳು ನಿಮ್ಮ EquatePlus ಖಾತೆಯಲ್ಲಿವೆ.

ನಮ್ಮ ಶೇರ್ 2024 ರಿಂದ ಹೊಸ ಖರೀದಿಸಿದ ಷೇರುಗಳು ಮತ್ತು ನಾವು ಲಾಭಾಂಶವನ್ನು ಪಾವತಿಸಿದಾಗಲೆಲ್ಲಾ ಡಿವಿಡೆಂಡ್ ಷೇರುಗಳೊಂದಿಗೆ ನಿಮ್ಮಹೂಡಿಕೆ ಹೇಗೆ ಬೆಳೆಯುತ್ತಿದೆ ಎಂಬುದನ್ನು ನೋಡಲು ಯಾವುದೇ ಸಮಯದಲ್ಲಿ ಪರಿಶೀಲಿಸಿ. ಮತ್ತು ಸಹಜವಾಗಿ, ನಿಮ್ಮ ಹೊಂದಾಣಿಕೆಯ ಷೇರುಗಳನ್ನು ಅನ್‌ಲಾಕ್ ಮಾಡುವವರೆಗೆ ನೀವು ಎಷ್ಟು ಸಮಯ ಕಾಯಬೇಕು ಎಂಬುದನ್ನು ನೋಡಿ! ಸಮಯಕ್ಕೆ ಹತ್ತಿರವಾಗಿ ಅವರೊಂದಿಗೆ ನೀವು ಏನು ಮಾಡಬಹುದು ಎಂಬುದನ್ನು ನಾವು ನಿಮಗೆ ತಿಳಿಸುತ್ತೇವೆ.

**OurShare Hub ಗೆ ಹೋಗುವ ಮೂಲಕ ಪ್ರಮುಖ OurShare 2023 ಮಾಹಿತಿಯನ್ನು ನೀವೇ ನೆನಪಿಸಿಕೊಳ್ಳಬಹುದು.**

# ಇನ್ನಷ್ಟು ತಿಳಿದುಕೊಳ್ಳಲು ಉತ್ಸುಕರಾಗಿದ್ದೀರಾ?

**OurShare ಗೆ ಸೇರಲು ಯೋಚಿಸುತ್ತಿದ್ದೀರಾ ಆದರೆ ಕೆಲವು ಪ್ರಶ್ನೆಗಳಿವೆಯೇ?**
ನೀವು ಹೊಂದಿರಬಹುದಾದ ಸಂಭವನೀಯ ಪ್ರಶ್ನೆಗಳನ್ನು ನಿರೀಕ್ಷಿಸಲು ಮತ್ತು ಉತ್ತರಗಳನ್ನು ಒದಗಿಸಲು ನಾವು ಈಗಾಗಲೇ ಪ್ರಯತ್ನಿಸಿದ್ದೇವೆ. ಇವುಗಳನ್ನು 'ನಿಮ್ಮ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ' ಎಂಬಲ್ಲಿ ನೀವು ಕಾಣಬಹುದು. OurShare Hub ನಲ್ಲಿ ಸಂಪನ್ಮೂಲಗಳ ವಿಭಾಗಕ್ಕೆ ಭೇಟಿ ನೀಡಿ.



# OurShare Hub

## OurShare ಕುರಿತು ಎಲ್ಲಾ ವಿಷಯಗಳಿಗೆ ನಿಮ್ಮ ಮಾರ್ಗದರ್ಶಿ

OurShare Hub ಎಲ್ಲಾ OurShare ಸಂಪನ್ಮೂಲಗಳಿಗೆ ನೆಲೆಯಾಗಿದೆ. ಅಲ್ಲಿ, ನೀವು ಇದು ಸೇರಿದಂತೆ ಸಾಕಷ್ಟು ಸಂಪನ್ಮೂಲಗಳನ್ನು ಕಾಣಬಹುದು:

- ನಿಮ್ಮ ಈ ಪ್ರಶ್ನೆಗಳಿಗೆ ಉತ್ತರಿಸಲಾಗಿದೆ: OurShare ಕುರಿತು ಸಾಮಾನ್ಯ ಪ್ರಶ್ನೆಗಳಿಗೆ ಉತ್ತರಗಳು.
- ನಿಮ್ಮ ಷೇರುಗಳು ಎಷ್ಟು ಮೌಲ್ಯಯುತವಾಗಿದೆ ಎಂದು ನೋಡಲು ನಿಮಗೆ ಸಹಾಯ ಮಾಡುವ ಕ್ಯಾಲ್ಕುಲೇಟರ್
- OurShare ಗೆ ಹೇಗೆ ಸೇರುವುದು ಎಂಬುದರ ಕುರಿತು ನಿಮಗೆ ಮಾರ್ಗದರ್ಶನ ನೀಡುವುದು ಹೇಗೆ ಎಂಬುದು
- ನಮ್ಮ ಯೋಜನೆಯ ನಿಯಮಗಳ ಒಂದು ಪ್ರತಿ

**OurShare Hub** ಅನ್ನು ಬುಕ್‌ಮಾರ್ಕ್ ಮಾಡಲು ಮರೆಯದಿರಿ!



# ಹೆಚ್ಚಿನ ಬೆಂಬಲ ಬೇಕಿದೆಯೇ?

ನಮ್ಮಂತೆಯೇ ನೀವು OurShare ಕುರಿತು ಉತ್ಸುಕರಾಗಿದ್ದೀರಿ ಎಂದು ನಾವು ಭಾವಿಸುತ್ತೇವೆ! ಇಲ್ಲಿ ಉತ್ತರಿಸದ ಪ್ರಶ್ನೆಯನ್ನು ನೀವು ಹೊಂದಿದ್ದರೆ, ದಯವಿಟ್ಟು OurShare ತಂಡವನ್ನು ಸಂಪರ್ಕಿಸಲು ಹಿಂಜರಿಯಬೇಡಿ: **ourshare@kerry.com**.

ನಿಮ್ಮ ಸ್ಥಳೀಯ OurShare ಚಾಂಪಿಯನ್ ಅನ್ನು ಸಹ ನೀವು ತಲುಪಬಹುದು, ಅವರು ನಿಮಗೆ ಸಹಾಯ ಮಾಡಲು ಸಂತೋಷಪಡುತ್ತಾರೆ. OurShare Hub ನಲ್ಲಿ ಯಾರನ್ನು ನೀವು ಸಂಪರ್ಕಿಸಬೇಕು ಎಂಬುದನ್ನು ಸಹ ನೀವು ಕಂಡುಕೊಳ್ಳಬಹುದು.

EquatePlus ಪ್ಲಾಟ್‌ಫಾರ್ಮ್ ಕುರಿತು ಯಾವುದೇ ಪ್ರಶ್ನೆಗಳಿಗೆ, ದಯವಿಟ್ಟು Computershare ಅನ್ನು ಸಂಪರ್ಕಿಸಿ - ವಿವರಗಳು **OurShare Hub** ನಲ್ಲಿ ಲಭ್ಯವಿವೆ.



KERRY

# Our**Share**

Kerry ಯ ಭಾಗವನ್ನು ಸ್ವಂತದ್ದಾಗಿ ಮಾಡಿ

1. Kerry Group plc ಯ ಯಾವುದೇ ಸದಸ್ಯರು ಅಥವಾ ಅದರ ಯಾವುದೇ ಅಧಿಕಾರಿಗಳು, ಉದ್ಯೋಗಿಗಳು, ಏಜೆಂಟ್‌ಗಳು ಅಥವಾ ಪ್ರತಿನಿಧಿಗಳು OurShare ಗೆ ಸಂಬಂಧಿಸಿದಂತೆ ನಿಮಗೆ ಯಾವುದೇ ಹೂಡಿಕೆ, ತೆರಿಗೆ ಅಥವಾ ಇತರ ಸಲಹೆಗಳನ್ನು ನೀಡುತ್ತಿಲ್ಲ.
2. OurShare ನಲ್ಲಿ ನೀವು ಭಾಗವಹಿಸಬೇಕೆ ಅಥವಾ ಬೇಡವೇ ಎಂಬುದು ವೈಯಕ್ತಿಕ ನಿರ್ಧಾರವಾಗಿದ್ದು ಇದು ನಿಮ್ಮ ಉದ್ಯೋಗ ಸಂಬಂಧದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.
3. Kerry ಷೇರುಗಳ ಮೌಲ್ಯ ಮತ್ತು ನೀವು ಮಾಡುವ ಯಾವುದೇ ಹೂಡಿಕೆಯು ಕಡಿಮೆಯಾಗಬಹುದು ಹಾಗೂ ಹೆಚ್ಚಾಗಬಹುದು. ಹಿಂದಿನ ಷೇರಿನ ಬೆಲೆಯ ಕಾರ್ಯಕ್ಷಮತೆಯು ಭವಿಷ್ಯದ ಷೇರು ಬೆಲೆಯ ಕಾರ್ಯಕ್ಷಮತೆಯ ಖಾತರಿಯಲ್ಲ.
4. ನಿಮ್ಮ ಕೊಡುಗೆಗಳನ್ನು ಬಳಸಿಕೊಂಡು ನೀವು ಪ್ರತಿ ತಿಂಗಳು ಪಡೆಯುವ ಷೇರುಗಳ ಸಂಖ್ಯೆಯು ಷೇರು ಬೆಲೆ ಮತ್ತು ಖರೀದಿಯ ಸಮಯದಲ್ಲಿನ ವಿನಿಮಯ ದರವನ್ನು ಅವಲಂಬಿಸಿ ಬದಲಾಗುತ್ತದೆ.
5. ವಿನಿಮಯ ದರಗಳು ಏರಿಳಿತವಾಗಬಹುದು. Kerry Group plc ಮತ್ತು ಅವರ ಯಾವುದೇ ಅಧಿಕಾರಿಗಳು, ಉದ್ಯೋಗಿಗಳು, ಏಜೆಂಟ್‌ಗಳು ಅಥವಾ ಪ್ರತಿನಿಧಿಗಳು ವಿನಿಮಯ ದರದಲ್ಲಿನ ಚಲನೆಗಳಿಗೆ ಮತ್ತು/ಅಥವಾ ಆಧಾರವಾಗಿರುವ ಷೇರುಗಳ ಮಾರಾಟ ಅಥವಾ ವರ್ಗಾವಣೆಯನ್ನು ಪಡೆದುಕೊಳ್ಳುವಲ್ಲಿ ವಿಳಂಬದಿಂದಾಗಿ ಯಾವುದೇ ನಷ್ಟಕ್ಕೆ ಜವಾಬ್ದಾರರಾಗಿರುವುದಿಲ್ಲ ಎಂದು ನೀವು ಒಪ್ಪಿಕೊಳ್ಳುತ್ತೀರಿ.
6. OurShare ನಲ್ಲಿ ನಿಮ್ಮ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಒದಗಿಸಲಾದ ಮಾಹಿತಿಯು ಮಾರ್ಗದರ್ಶನವಾಗಿ ಮಾತ್ರ ಕಾರ್ಯನಿರ್ವಹಿಸುತ್ತದೆ ಮತ್ತು ನಿಮ್ಮ ಸ್ವಂತ ಸ್ಥಾನಕ್ಕೆ ನಿರ್ದಿಷ್ಟವಾಗಿರಲು ಉದ್ದೇಶಿಸಿಲ್ಲ. ಸೇರಬೇಕೆ ಅಥವಾ ಬೇಡವೇ ಎಂಬ ಬಗ್ಗೆ ನಿಮಗೆ ಯಾವುದೇ ಸಂದೇಹವಿದ್ದರೆ, ನೀವು ಅರ್ಹವಾದ ಸ್ವತಂತ್ರ, ವೃತ್ತಿಪರ ಆರ್ಥಿಕ ಸಲಹೆಯನ್ನು ಪಡೆಯಬೇಕು. Kerry Group plc ಮತ್ತು ಅದರ ಯಾವುದೇ ಅಧಿಕಾರಿಗಳು, ಉದ್ಯೋಗಿಗಳು, ಏಜೆಂಟ್‌ಗಳು ಅಥವಾ ಪ್ರತಿನಿಧಿಗಳು ಒದಗಿಸಿದ ಮಾಹಿತಿಯ ಪರಿಣಾಮವಾಗಿ ತೆಗೆದುಕೊಂಡ ಯಾವುದೇ ಕ್ರಮಕ್ಕೆ ಜವಾಬ್ದಾರರಾಗಿರುವುದಿಲ್ಲ.
7. OurShare ನಲ್ಲಿ ನಿಮ್ಮ ಭಾಗವಹಿಸುವಿಕೆಯು ಯೋಜನಾ ನಿಯಮಗಳು, ನಿರ್ಣಯ ಒಪ್ಪಂದ ಮತ್ತು ಉಲ್ಲೇಖದ ಮೂಲಕ ಸಂಯೋಜಿಸಲಾದ ಯಾವುದೇ ಇತರ ಡಾಕ್ಯುಮೆಂಟ್‌ಗೆ ಒಳಪಟ್ಟಿರುತ್ತದೆ, ಅದನ್ನು OurShare hub ನಲ್ಲಿ ಕಾಣಬಹುದು. ಈ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಮಾಹಿತಿ ಮತ್ತು OurShare ಗೆ ಸಂಬಂಧಿಸಿದಂತೆ ಮಾಡಿದ ಇತರ ಸಂವಹನಗಳೊಂದಿಗಿನ ಸಂಘರ್ಷ ಸೇರಿದಂತೆ ಎಲ್ಲಾ ಸಂದರ್ಭಗಳಲ್ಲೂ ಆಗಿನ ಯೋಜನೆ ನಿಯಮಗಳು, ನಿರ್ಣಯ ಒಪ್ಪಂದ ಮತ್ತು ಉಲ್ಲೇಖದ ಮೂಲಕ ಸಂಯೋಜಿಸಲಾದ ಯಾವುದೇ ಇತರ ದಾಖಲೆಗಳು ಮೇಲುಗೈ ಸಾಧಿಸುತ್ತವೆ.
8. ಕೆಲವೊಮ್ಮೆ, ಕೆಲವು ಸಹೋದ್ಯೋಗಿಗಳು ಇನ್ನೂ ಸಾರ್ವಜನಿಕವಾಗದ ಮಾಹಿತಿಯನ್ನು ತಿಳಿದಿರಬಹುದು, ಆದರೆ ಇದು ನಮ್ಮ ಷೇರು ಬೆಲೆಯ ಮೇಲೆ ಪರಿಣಾಮ ಬೀರಬಹುದು (ಉದಾ. ಮುಂಬರುವ ವರ್ಷಾಂತ್ಯದ ಹಣಕಾಸು ಫಲಿತಾಂಶಗಳು). ಇದು ನಿಮಗೆ ಅನ್ವಯಿಸಿದರೆ, Kerry ಷೇರುಗಳಲ್ಲಿ ವ್ಯಾಪಾರ ಮಾಡುವ ನಿಮ್ಮ ಸಾಮರ್ಥ್ಯದ ಮೇಲೆ ಪರಿಣಾಮ ಬೀರಬಹುದು. ಇದು ನಿಮಗೆ ಅನ್ವಯಿಸುವುದಾದರೆ Kerry Group plc ನಿಮ್ಮನ್ನು ಸಂಪರ್ಕಿಸಬಹುದು. ಹೆಚ್ಚಿನ ವಿವರಗಳಿಗಾಗಿ ನಮ್ಮ ಸೆಕ್ಯುರಿಟೀಸ್ ಕುರಿತು ವ್ಯವಹರಿಸುವಿಕೆ ಪಾಲಿಸಿ ನೋಡಿ.